ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.109/2021 ,

ಚಾಸಾ- 21, ಫ್ರಾಸಾ -6

| | |
|---|---|
| ಹೆಸರು | ಅಭಿಷೇಕ್ |
| ತಂದೆಯ ಹೆಸರು | ದೊಂಬಯ್ಯ |
| ವಯಸ್ಸು | 23 ವರ್ಷ |
| ಕೆಲಸ | ಖಾಸಗಿ ಕೆಲಸ |
| ವಾಸ | ಅಲಂಗಾರು |
| ಪ್ರಮಾಣೀಕರಿಸಿದ ದಿನಾಂಕ | 04-11-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಮೃತ ಗ್ರೇಷನ್ ಲೆಸ್ಲಿ ರೋಡ್ರಿಗಸ್ ಮತ್ತು ಮೃತ ಪ್ರವೀಣ್ ತಾವ್ರೋ ರವರು ಗೊತ್ತಿಲ್ಲ . ಆರೋಪಿತರು ಗೊತ್ತಿಲ್ಲ . ಈ ಪ್ರಕರಣದಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ . ಸಾಕ್ಷಿ ನಿಪಿ-24 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನಿಪಿ-24 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-24(ಸಿ) ಎಂದು ಗುರುತಿಸಲಾಯಿತು . ನಿಪಿ-24 ಕ್ಕೆ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ . ಆ ಸಮಯದಲ್ಲಿ ಯಾರೆಲ್ಲಾ ಇದ್ದರು ಎಂದು ನನಗೆ ಗೊತ್ತಿಲ್ಲ . ಮೃತ ಗ್ರೇಷನ್ ಲೆಸ್ಲಿ ರೋಡ್ರಿಗಸ್ ಮತ್ತು ಮೃತ ಪ್ರವೀಣ್ ತಾವ್ರೋ ರವರು ಹೇಗೆ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ , ನನ್ನ ಸಮಕ್ಷಮ ಯಾವುದೇ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ.

*( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ 21-11-2018 ರಂದು ಈ ಪ್ರಕರಣದಲ್ಲಿ ಆರೋಪಿ ಸುರೇಶ್ ರವರು ತೋರಿಸಿಕೊಟ್ಟ ಮೇರೆಗೆ , ಆರೋಪಿಯು ಆತನ ಮನೆಯಾದ ಕರಿಂಜೆಯ ಅರಹಂತ ಕಾಂಪೌಂಡ್ ಬಳಿಯ ಮನೆಯ ಬಚ್ಚಲು ಕೋಣೆಯೊಳಗೆ ಕೃತ್ಯಕ್ಕೆ ಉಪಯೋಗಿಸಿದ್ದ ಒಂದು ನೀಲಿ ಬಿಳಿ ಮತ್ತು ಬೂದು ಬಣ್ಣದ ಸಿಂಥಿಟಿಕ್ ಚೀಲವನ್ನು ತೆಗೆದು ಅದರಲ್ಲಿ ಇದ್ದ ಬಿಳಿ ಬಣ್ಣದ ಎರಡು ವೈಯರ್ ನ ಕಟ್ಟು ಹಾಗೂಬ ಸ್ಕಿನ್ ಲೆಸ್ ವೈಯರ್ ನ ಕಟ್ಟನ್ನು ತೆಗೆದು , ಅದೇ ವೈಯರ್ ನ್ನು ಅರಮನೆ ಸಂಕಪ್ಪ ಶೆಟ್ಟಿಯವರ ಗದ್ದೆಗೆ ಕಟ್ಟಿ , ಅದರಿಂದಲೇ ವಿದ್ಯುತ್ ಪ್ರವಹಿಸಿ , ಮೃತ ಗ್ರೇಷನ್ ಲೆಸ್ಲಿ ರೋಡ್ರಿಗಸ್ ಮತ್ತು ಮೃತ ಪ್ರವೀಣ್ ತಾವ್ರೋ ರವರು ಮರಣಕ್ಕೆ ತುತ್ತಾಗಿರುತ್ತಾರೆ ಎಂದು ನನ್ನ ಹಾಗೂ ಚಾಸಾ-20 ರವರ ಸಮಕ್ಷಮದಲ್ಲಿ 14-00 ಗಂಟೆಯಿಂದ 15-00 ಗಂಟೆಯವರೆಗೆ ಮಾಡಲಾದ ಮಹಜರಿಗೆ ಸ್ಥಳದಲ್ಲಿಯೇ ಹಾಜರಿದ್ದು , ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಮು.ಮಾ-14 ರಿಂದ 17 ನ್ನು ಯಾವ ಕಾರಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಪೊಲೀಸರಿಗೆ ನನ್ನ ಹೇಳಿಕೆಯನ್ನೂ ಕೂಡ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು ನಿಪಿ-33 ಎಂದು ಗುರುತಿಸಲಾಯಿತು . ಆರೋಪಿಯನ್ನು ಹಾಗೂ ಸ್ವತ್ತುಗಳನ್ನು ನೋಡಿ ಗುರುತಿಸಿದ ಬಗ್ಗೆ ಪ್ರಕರಣದ ಬಗ್ಗೆ ತಿಳಿದು ಈ ಬಗ್ಗೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿಯೊಂದಿಗೆ ಸೇರಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲುಃ  ಆರೋಪಿಗಳ ಪರ ವಕೀಲರು  ಪಾಟಿಸವಾಲು ಇಲ್ಲವೆಂದು ತಿಳಿಸಿರುತ್ತಾರೆ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ